DC-674
T.P-2

Reg B G No.155 18-9-1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಒಂದು ದಿನದ ಮುಷ್ಕರದಿಂದ ಆಗುವ ನಷ್ಟ.

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವನನ್ನು ಬೇಗನೇ ನೆನೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನಸೆರೆವನ್ನೂ ಆದರ ಪೂರ್ವಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇನೆ

ಸಂಸ್ಥಾಪಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಬಾಕಿ ಪಾವತಿ ಮಾಡದಿದ್ದರೆ

ಗಯಾ— ರಾಜ್ಯದ 800 ಸ್ಥಳಗಳಿಗೆ ಟಾಗರ ಇತ್ಯಾದಿ ತೆಗೆದುಕೊಂಡುಹೋಗುವ ಬಿಹಾರು ಸಾರಿಗೆ ಸಂಸ್ಥೆಯವರು ತಮಗೆ ಕೊಡಬೇಕಾದ ಬಾಕಿಯನ್ನು ಅಂಚೀತಂತಿ ಇಲಾಖೆಯವರು ಕೂಡಲೇ ವ್ಯವಸ್ಥೆ ಮಾಡದಿದ್ದರೆ, ತಮ್ಮ ಸೇವೆಯನ್ನು ನಿಲ್ಲಿಸುವುದಾಗಿ ತಿಳಿಸಿರುವರು – ಈ ಮಾರ್ಚಿಯಲ್ಲಿ ಬಾಕಿ ರೂ. 3 ಲಕ್ಷಕ್ಕೂ ಹೆಚ್ಚಿದ್ದಿತು.

ಒಂದು ದಿನದ ಮುಷ್ಕರದ ಪರಿಣಾಮ

★

ನವದೆಹಲಿ – ಕೇಂದ್ರ ನೌಕರರ ಒಂದು ದಿನದ ಮುಷ್ಕರದಿಂದ ಆಗುವ ನಷ್ಟವನ್ನು ರಾಷ್ಟ್ರ ಎದುರಿಸುವುದು ಅಸಾಧ್ಯವೇನೂ ಸರಿ.

ಕೇಂದ್ರ ಸರಕಾರ ಹಾಗೂ ಆಹಾರ ಕಾರ್ಯದರ್ಶಿ ಸರಬರಾಜು ಮಾಡುವ 30 ಸಹಸ್ರ ಟನ್ ಆಹಾರಧಾನ್ಯಗಳ ಸಾಗಾಣಿಕೆ ತಟಸ್ಥಗೊಂಡು ಅನಾವೃಷ್ಟಿ ಹಾಗೂ ಮಹಾ ಪೂರದಿಂದ ನಷ್ಟಗೊಂಡಿರುವ ಪ್ರದೇಶಗಳಿಗೆ ಸರಬರಾಜು ನಿಂತುಹೋಗುತ್ತದೆ.

5.5 ಲಕ್ಷ ಟನ್ ಸರಕುಗಳನ್ನು ಸಾಗಾಣಿಕೆ ಮಾಡುವ 5 ಸಾವಿರ ಗೂಡ್ಸ್ ರೈಲುಗಳ ಸಂಚಾರ ನಿಂತುಹೋಗುತ್ತದೆ; ಪಡಿತರವಿರುವ ಪ್ರದೇಶಗಳಿಗೆ ಆಹಾರಧಾನ್ಯ, ಔಷಧಿ, ಬಟ್ಟೆ ಇತ್ಯಾದಿ ಎಲ್ಲವೂ ಸ್ಥಗಿತವಾಗುತ್ತದೆ.

ಮುಷ್ಕರದಿಂದ 15 ಕೋಟಿ ಪತ್ರಗಳ ಸಾಗಾಣಿಕೆ, ವಿತರಣೆ 1.2 ಲಕ್ಷ ತಂತಿ ಸಮಾಚಾರ ರವಾನೆ, 3 ಲಕ್ಷ ಟ್ರಂಕ್ ಕಾಲ್ ಹಾಗೂ ಸುಮಾರು ರೂ. 7 ಲಕ್ಷ ಬೆಲೆಯ ಪೋಸ್ಟಲ್ ಆರ್ಡರುಗಳ ಮಾರಾಟ ನಿಂತುಹೋಗುತ್ತದೆ.

ಸಂರಕ್ಷಣಾ ಶಾಖೆಯ ಮದ್ದು ಗುಂಡು ಇತ್ಯಾದಿ ತಯಾರಿಕಾ ಕಾರ್ಖಾನೆಗಳು ಅಹರ್ನಿಶಿ ಕಾರ್ಯನಿರ್ವಹಿಸುವುದರಿಂದ, ಮುಷ್ಕರ ಸಂಭವಿಸಿದರೆ ಒಂದು ಕೋಟಿ ರೂ. ಪ್ರತ್ಯೂಷಣನ ಸಂರಕ್ಷಣೆ ಉತ್ಪಾದನೆಯಲ್ಲಿ ನಷ್ಟವಾಗಲಿದೆ.

●

ವಸ್ತುಪ್ರದರ್ಶ

ಮೈಸೂರು— ದಸರಾ ವಸ್ತುಪ್ರದರ್ಶನವನ್ನು ತಾ || 23 ಸಂಜೆ ಗೌರ್ನರ್ ಶ್ರೀ ಪಠಕ್ ಉದ್ಘಾಟಿಸುವರು ; ಕೈಗಾರಿಕಾ ಮಂತ್ರಿ ಶ್ರೀ ರಾಜಶೇಖರಮೂರ್ತಿ ಅಧ್ಯಕ್ಷತೆ ವಹಿಸುವರು.

ಆಹಾರಧಾನ್ಯ ಶೇಖರಣೆ

ನವದೆಹಲಿ— 68-69 ನೇ ಬೆಳೆಯಲ್ಲಿ ರಾಷ್ಟ್ರವು 8 ರಿಂದ 9 ಮಿಲಿಯ ಟನ್ ಆಹಾರಧಾನ್ಯ ಶೇಖರಿಸಲು ವ್ಯವಸಾಯ ಬೆಲೆಯ ಕಮಿಷನ್ ಶಿಫಾರಸು ಮಾಡಿದೆ – ಕಾರೀಫ್‌ನಲ್ಲಿ 4.2 ಮಿಲಿಯ ಟನ್ ಅಕ್ಕಿ ಮತ್ತು 1.5 ಮಿಲಿಯ ಒರಟು ಧಾನ್ಯ ಶೇಖರಣೆಗೆ ಸಲಹೆನೀಡಿದೆ.

★

ವಿಚಿತ್ರ ಕರು

ಭದ್ರಾಚಲಂ— ಇಲ್ಲಿಗೆ 3 ಮೈಲಿ ದೂರದ ಬೂರಗಂಪಹಾಡ್‌ನಲ್ಲಿ ಒಂದು ಎಮ್ಮೆ 2 ತಲೆ 2 ಬಾಲಗಳುಳ್ಳ ವಿಚಿತ್ರ ಮರಿಯನ್ನು ಹಾಕಿದೆ.

★

ತಾಲ್ಲೂಕ್ ಬೋರ್ಡು

ಬೆಂಗಳೂರು— ತಾಲ್ಲೂಕು ಬೋರ್ಡು ಚುನಾವಣೆಗಳು ನವೆಂಬರಿನಲ್ಲಿ ನಡೆಯುವುದು ಖಂಡಿತವೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

★

ಗಾಂಜಾ ವಶ

ಬೊಂಬಾಯಿ— ರೂ. 2 87 ಲಕ್ಷದ 96000 ತೋಲಾ ಗಾಂಜಾವನ್ನು ಎಸಿಬಿ ಅಧಿಕಾರಿಗಳು ಒಂದು ಕಡೆ ವಶಪಡಿಸಿಕೊಂಡು ಕೆಲವರನ್ನು ಬಂಧಿಸಿದರು.

★

ರಾಯಭಾರಿ ನುಡಿ

ಬೆಂಗಳೂರು ಏಷ್ಯಾದ ಅಭ್ಯುದಯವು ಈ ಖಂಡದ ರಾಷ್ಟ್ರಗಳ ಸಹಕಾರ ಮತ್ತು ಐಕ್ಯತೆ ಮೇಲೆ ನಿಂತಿದೆ ಎಂದು ಭಾರತದಲ್ಲಿನ ಜಪಾನ್ ರಾಯಭಾರಿ ಶ್ರೀ ಹೋಜ ಹೇಳಿದರು.

ಚೀಣಾದೊಡನ್ತೆ ಸಂಬಂಧ ತ್ಯಜಿಸಲು

ನವದೆಹಲಿ— ಚೀಣಾದೊಡನೆ ಭಾರತವು ರಾಜಕೀಯ ಸಂಬಂಧ ತ್ಯಜಿಸಬೇಕೆಂದು ಪಾರ್ಲಿಮೆಂಟಿನ ಕಮ್ಯೂನಿಸ್ಟೇತರ ಎಲ್ಲಾ ಪಕ್ಷಗಳ 125 ಸದಸ್ಯರು ಹೇಳಿಕೆ ಹೊರಡಿಸಿರುವರು.

★

ಆರ್ಡಿನೆನ್ಸ್ ವಿರುದ್ಧ ರಿಟ್

ನವದೆಹಲಿ— ಮುಷ್ಕರ ಸಂಬಂಧದ ವಿರುದ್ಧ ಸರ್ಕಾರಿ ನೌಕರರ ನ್ಯಾಷನಲ್ ಫೋರಂನ ವ್ಯವಸ್ಥಾಪಕ ಕಾರ್ಯದರ್ಶಿ ಶ್ರೀ ಶರ್ಮರು ಡೆಲ್ಲೀ ಹೈ ಕೋರ್ಟಿನಲ್ಲಿ ರಿಟ್ ಹಾಕಿರುವರು.

●

ಕನ್ನಡ ನಾಡು

ಬೆಂಗಳೂರು— ಮೈಸೂರು ರಾಜ್ಯದ ಹೆಸರನ್ನು ಕನ್ನಡ ನಾಡು ಎಂದು ಬದಲಾಯಿಸುವ ಬಗ್ಗೆ ಶಾಸನಸಭೆಯಲ್ಲಿ ಯುಕ್ತಾಯುಕ್ತ ಭಾಷಣ ಮಾಡಿದುರ.

★

ಕೇರಳದ ನಕಾತ

ತ್ರಿವೇಂಡ್ರಮ್— ಕೇಂದ್ರ ಸರಕಾರಿ ನೌಕರರ ಮುಷ್ಕರ ಸಂಬಂಧದಲ್ಲಿ ದಸ್ತಗಿರಿ ಮತ್ತು ಮತ್ತು ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳದಿರಲು ಕೇರಳ ಸರ್ಕಾರ ನಿರ್ಧರಿಸಿದೆ

ಫಸ್ಟ್‌ಕ್ಲಾಸ್ ಜಿಕೋಮಾಕ್

ಮಂಡ್ಯ— ಚಾಮುಂಡಿ ಎಕ್ಸ್‌ಪ್ರೆಸ್ ನಿನ್ನೆ ಮಂಡ್ಯದಿಂದ ಮೈಸೂರು ಕಡೆಗೆ ಹೊರಟ ಸ್ವಲ್ಪ ಕಾಲದಲ್ಲಿ ಒಬ್ಬ ಯುವಕ ಅಲಾರಂ ಚೈನ್ ಎಳೆದು ರೈಲು ಮೆಲ್ಲಗಾದೊಡನೆ ಒಬ್ಬ ಪ್ರಯಾಣೀಕನ ರೂ. 700 ಪಿಕ್‌ಪಾಕೆಟ್ ಮಾಡಿ, ರೈಲಿಂದ ಹಾರಿ ಮಾರ್ಕೆಟ್ ಹತ್ತಿರ ಪ್ರಯಾಣವಾದ.

ಮುಷ್ಕರಿಸುವವರ ಪ್ರದರ್ಶನ

ನವದೆಹಲಿ— ನಿನ್ನೆ ಇಲ್ಲಿ 25000 ಕೇಂದ್ರ ಸರ್ಕಾರಿ ನೌಕರರು ತಮ್ಮತಮ್ಮ ಕಛೇರಿಗಳ ಮುಂದೆ ಪ್ರದರ್ಶನ ನಡೆಸಿದರು.

(೭)

ಹಿಂದೂಗಳ ಆಚಾರ

ಸಂಗ್ರಾಹಕರು— 'ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

4 ಪ್ರತಿನಿತ್ಯವೂ ಪ್ರಾತಃಕಾಲ ಎದ್ದಕೂಡಲೇ ಪರಮಾತ್ಮನನ್ನೂ, ಗುರುಗಳನ್ನೂ, ಮಹಾಪುರುಷರನ್ನೂ ಸ್ಮರಣೆಮಾಡಿ, ನಂತರ ಶೌಚಾದಿಗಳನ್ನು ನಡೆಸಿ, ಮುಖಮಾರ್ಜನದನಂತರವೇ ಆಹಾರವನ್ನು ಸ್ವೀಕರಿಸಬೇಕು.

ರಾತ್ರಿ ನಿದ್ರೆಮಾಡುವ ಕಾಲದಲ್ಲಿ ಬುದ್ಧಿಯು ವಿಶ್ರಾಂತಿಯನ್ನು ಹೊಂದಿರುತ್ತದೆ. ಪ್ರಾತಃಕಾಲ ಎದ್ದಕೂಡಲೇ ಒಳ್ಳೆಯ ಸ್ಮರಣೆ ಮಾಡಿದಲ್ಲಿ ಆ ದಿನವೆಲ್ಲಾ ಮನಸ್ಸು ಪ್ರಶಾಂತವಾಗಿರುತ್ತದೆ. ಅದಕ್ಕೆ ವಿಪರೀತವಾಗಿ ನಡೆದಲ್ಲಿ ಮನಸ್ಸು ಅಶಾಂತಿಯನ್ನು ಹೊಂದಿ, ದಿನದಲ್ಲಿ ನಾವು ಮಾಡುವ ಕೆಲಸಗಳಲ್ಲಿ ನಾನಾ ರೀತಿಯ ಕ್ಲೇಶಗಳನ್ನು ಹೊಂದಬೇಕಾಗುತ್ತದೆ.

ಶುಚಿತ್ವದಿಂದ ಆರೋಗ್ಯ ರಕ್ಷಣೆಯಾಗುತ್ತದೆ ನಮ್ಮ ಶಾಸ್ತ್ರಗಳಲ್ಲಿ ಹೇಳಿರುವ ಮೃತ್ತಿಕಾಶೌಚವು ವೈಜ್ಞಾನಿಕವಾದುದಾಗಿದೆ. ಹಲ್ಲುಜ್ಜುವೇ ಪಾಶ್ಚಿಮಾತ್ಯರಂತೆ ಹಾಸಿಗೆಯ ಮೇಲೆ ಕಾಫಿ ಕುಡಿಯುವುದು, ಕೂದಲಿನಿಂದ ಮಾಡಲ್ಪಟ್ಟ ಬ್ರಷ್‌ನಿಂದ ಹಲ್ಲುಜ್ಜುವುದು ಮುಂತಾದ ಕ್ರಮಗಳಿಂದ ಜಠರ ಮತ್ತು ಹಲ್ಲು ರೋಗಕ್ಕೆ ತುತ್ತಾಗುವ ಕಾರಣವಾಗುತ್ತದೆ.

ಶ್ಲೋ ॥ ಉತ್ಥಾಯ ತಸ್ಮಾತ್ ಶಯನಾತ್ ಪಾದೌಪ್ರಕ್ಷಾಲ್ಯವಾಗ್ಯತಃ ।
ಆಚಮ್ಯ ಸಂಸ್ಪೃಶೇತ್ಪೂಮಿಂ ಮಂತ್ರಮೇತಂ ಸಮುಚ್ಚರ್ಯ ॥

ಶ್ಲೋ ॥ ಸಮುದ್ರವೇಷಲೇದೆ ವಿಪರ್ವತಸ್ತನಮಂಡಿತೇ ।
ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವಮೆ ॥

Help The Gorakshana

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಚ್ಚಾಗಿ ನಡೆಯಲಿ

Cow Slaughter should be banned Immediately

SHAKTI SUDHA

A Superb Tonic

ವುಡ್‌ಲಾಂಡ್ಸ್ 12-9-68 ರಿಂದ
ವೈಭವ ಆರಂಭ

— ಮನಮೋಹಕ ಹಿಂದಿ ಚಿತ್ರ —

ನೀಲ್ ಕಮಲ್ ★ Neel Kamal

ಈಸ್ಟ್‌ಮನ್ ಕಲರ್

.... ಮಿಡಿಯುಗಟ್ಟಲೆ ರೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಅಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನವರಿಯ 3 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮನ್ಮೋಜ್, ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Printing — Neat ; Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳಿಗಾಗಿ ದೊರೆಯುವ ಕ್ಷವೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4